ಆ) ವಿಶ್ವಬ್ಯಾಂಕ್ ನೆರವಿನ ಯೋಜನೆಯಡಿ ಈ ಆಸ್ಪತ್ರೆ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು ಉದ್ದೇಶಿಸಿದ್ದು, ಹಂತ ಹಂತವಾಗಿ ಕಾಮಗಾರಿ ಕೈಗೊಂಡು ಪೂರೈಸಲಾಗುವುದು.

ವಿಷಯ:- ಗೋಕಾಕ್ ತಾಲ್ಲೂಕಿನ ಖನಗಾಂವ್ ಮತ್ತು ಸುತ್ತಲಿನ ಕೆಲವು ಹಳ್ಳಿಗಳಿಗೆ ಶಾಶ್ವತ ಕುಡಿಯುವ ನೀರು ಸರಬರಾಜು.

1306 (2122) **ಶ್ರೀ ಚಂದ್ರಶೇಖರ್ ನಾಯಕ್ (ಗೋಕಾಕ್):-** ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಆ) ಗೋಕಾಕ್ ತಾಲ್ಲೂಕಿನ ಖನಗಾಂವ್, ಮಿಡಕನಟ್ಟಿ, ಸಬಾಪೂರ, ದೇವಗೌಡನಟ್ಟಿ ಮತ್ತು ಸುತ್ತಲಿನ 9 ಹಳ್ಳಿಗಳು ಕುಡಿಯುವ ನೀರಿನ ತೊಂದರೆಯಿಂದ ಬಳಲುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಸದರಿ ವಿಷಯ ಕುರಿತು ದಿ: 19-6-96ರಂದು ಕೆ.ಡಿ.ಪಿ. ಮೀಟಿಂಗ್‌ನಲ್ಲಿ ಘಟಪ್ರಭಾ ನದಿಯಿಂದ ಶಾಶ್ವತ ನೀರು ಸರಬರಾಜು ಕುರಿತು ಮಂಡಿಸಿದ ವಿಚಾರದ ಬಗ್ಗೆ ನಡೆದಂತಹ ಯೋಜನೆಗಳ ರೂಪುರೇಶೆಗಳು ಏನು?

ಇ) ಸದರಿ ಯೋಜನೆ ಜಾರಿಗೆ ಬರಲು ಎಷ್ಟು ಅವಧಿ ಬೇಕಾಗುವುದು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-

ಆ) ಖನಗಾಂವ್, ಮಿಡಕನಟ್ಟಿ, ನಬಾಪೂರ, ದೇವಗೌಡನಟ್ಟಿ ಗುಡನಟ್ಟಿ, ಕೇಶಪ್ಪನಟ್ಟಿ, ಜಿ. ಹೊನೂರ, ಪುಡಕಲ ಕಟ್ಟಿ ಹಾಗೂ ಕೈತನಾಳ ಗ್ರಾಮಗಳು ಬೇಸಿಗೆ ಸಮಯದಲ್ಲಿ ಕುಡಿಯುವ ನೀರಿನ ತೊಂದರೆಗೆ ಒಳಗಾಗುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಖನಗಾಂವ್ ಗ್ರಾಮದ ಸುತ್ತಲಿನ 8 ಗ್ರಾಮಗಳಿಗೆ ಶಾಶ್ವತವಾದ ಕುಡಿಯುವ ನೀರಿನ ಯೋಜನೆ ಕುರಿತು ಗೋಕಾಕ್ ನಗರದ ಎಡದಂಡೆ ಬದಿಯಲ್ಲಿ ಹರಿಯುವ ಘಟಪ್ರಭಾ ನದಿಯ ನೀರನ್ನು ನಿಯೋಜಿಸಲ್ಪಟ್ಟ, ಜ್ಯಾಕ್‌ವೆಲ್‌ದಿಂದ ಸುಮಾರು 28 ಕಿ.ಮೀ. ಅಂತರದಲ್ಲಿರುವ ಖನಗಾಂವ ಗ್ರಾಮದ ಹತ್ತಿರ ಇರುವ ಗುಡ್ಡದವರೆಗೆ ಏರುಕೊಳವೆ ಮಾರ್ಗದ ಮುಖಾಂತರ ನಿಯೋಜಿಸಲ್ಪಟ್ಟ ಶುದ್ಧೀಕರಿಸಿದ ನೀರಿನ ಸಂಗ್ರಹಾಲಯದಲ್ಲಿ ನೀರನ್ನು ಸಂಗ್ರಹಿಸಿ, ಈ ಜಲ ಸಂಗ್ರಹಾಲಯದಿಂದ 9 ಗ್ರಾಮಗಳಿಗೆ ಏರುಕೊಳವೆ ಮಾರ್ಗದ ಮುಖಾಂತರ ನೀರನ್ನು ಪೂರೈಸಲು ಯೋಜಿಸಲಾಗಿದೆ. ಈ ಕುಡಿಯುವ ನೀರಿನ ಯೋಜನೆಯ ಅಂದಾಜು ಪತ್ರಿಕೆಗಳನ್ನು ತಯಾರಿಸುವ ಸಲುವಾಗಿ ಸರ್ವೆ ಕೆಲಸವು ಪ್ರಗತಿಯಲ್ಲಿ ಇದೆ.

ಇ) ಯೋಜನೆಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ನೀಡಿ ಆವಶ್ಯ ಅನುದಾನ ಒದಗಿಸಿ, ಮೂರು ವರ್ಷಗಳಲ್ಲಿ ಕಾರ್ಯರೂಪಕ್ಕೆ ತರಲು ಉದ್ದೇಶಿಸಲಾಗಿದೆ.

ವಿಷಯ:- ಬಿಜಾಪುರ ಜಿಲ್ಲೆಯಲ್ಲಿ ಗ್ರಂಥಾಲಯಗಳನ್ನು ಒದಗಿಸುವುದು

1307 (2070) **ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ):-** ಮಾನ್ಯ ವಯಸ್ಕರ ಶಿಕ್ಷಣ ಮತ್ತು